ಸಾಕ್ಷಿಯನ್ನು ದಿಃ **04.01.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಟಿ ಎಸ್ ಎಸ್ ವಕೀಲರಿಂದಃ**

ಎನ್.ಎಂ.ಗಾಂಧಿ ಬಿನ್ ಮಹದೇವೆಗೌಡ, ವಯಸ್ಸು **35** ವರ್ಷ, ನಾನು ಈ ದಾವೆಯಲ್ಲಿ ವಾದಿಯ ಜಿ ಪಿ ಎ ಹೋಲ್ಡ್ ರ್ ಆಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಕುಟುಂಬಕ್ಕೆ ಸಂಬಂಧಿಸಿದ ವಂಶ ವೃಕ್ಷ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**1** ಎಂದು, ಸರ್ವೆ ನಂಬರ್ **135/8** ಆಸ್ತಿಗೆ ಸಂಬಂಧಿಸಿದ ಒಂದು ಆರ್ ಟಿ ಸಿ ನಿಪಿ.**2** ಎಂದು, ಸರ್ವೆ ನಂಬರ್ **126/5** ಆಸ್ತಿಗೆ ಸಂಬಂಧಿಸಿದ ಒಂದು ಆರ್ ಟಿ ಸಿ ನಿಪಿ.**3** ಎಂದು, ಸರ್ವೆ ನಂಬರ್ **135/8** ಆಸ್ತಿಗೆ ಸಂಬಂಧಿಸಿದ ಎರಡು ಆರ್ ಟಿ ಸಿಯನ್ನು ನಿಪಿ.**4** ಮತ್ತು ನಿಪಿ.**5** ಎಂದು, ಸರ್ವೆ ನಂಬರ್ **126/5** ಆಸ್ತಿಗೆ ಸಂಬಂಧಿಸಿದ ಎರಡು ಆರ್ ಟಿ ಸಿ ನಿಪಿ.**6** ಮತ್ತು **7** ಎಂದು, ಸರ್ವೆ ನಂಬರ್ **126/4** ಆಸ್ತಿಗೆ ಸಂಬಂಧಿಸಿದ ಒಂದು ಗಣಕೀಕೃತ ಆರ್ ಟಿ ಸಿಯನ್ನು ನಿಪಿ.**8** ಎಂದು, ಸರ್ವೆ ನಂಬರ್ **126/4** ರ ಆಸ್ತಿಗೆ ಸಂಬಂಧಿಸಿದ ಕೈ ಬರಹದ ನಾಲ್ಕು ಆರ್ ಟಿ ಸಿಯನ್ನು ಕ್ರಮವಾಗಿ ನಿಪಿ.**9** ರಿಂದ ನಿಪಿ.**12** ಎಂದು, ಸರ್ವೆ ನಂಬರ್ **126/4** ಆಸ್ತಿಗೆ ಸಂಬಂಧಿಸಿದ ಮ್ಯುಟೇಷನ್ ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**13** ಎಂದು, ಸರ್ವೆ ನಂಬರ್ **126/5** ಆಸ್ತಿಗೆ ಸಂಬಂಧಿಸಿದ ಮ್ಯುಟೇಷನ್ ರಿಜಿಸ್ಟರ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**14** ಎಂದು, ದಿನಾಂಕ **01.10.2016** ರ ಒಂದು ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**15** ಎಂದು, ದಿನಾಂಕ **26.11.1967** ರ ಒಂದು ನೋಂದಾಯಿತ ಕ್ರಯಪತ್ರವನ್ನು ನಿಪಿ.**16** ಎಂದು, ದಿನಾಂಕ **17.07.1974** ರ ಒಂದು ಸೆಟಲ್ ಮೆಂಟ್ ಡೀಡ್ ನ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**17** ಎಂದು, ಸುಂದರಮ್ಮ ರವರ ಶಾಲಾ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.**18** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ